ಬ್ಲೌಸ್‌ಗೆ ಬಡ್ತಿ ಪಡೆದಿದ್ದಳು. ಎತ್ತರವಾಗಿ ಬೆಳೆದಿದ್ದಳು. ಮಕ್ಕಳಿಬ್ಬರೂ ನಿಕ್ಕರ್‌ನಿಂದ ಪ್ಯಾಂಟ್‌ಗೆ ಬಡ್ತಿ ಪಡೆದಿದ್ದರು. ಆಂಜನೇಯಪ್ಪ ಮೇಷ್ಟ್ರು,ಅವರ ಹೆಂಡತಿ ನನ್ನೊಡನೆ ಬಹಳ ಮಾತನಾಡಿದ್ದರು.

ಮಾತನಾಡದಿದ್ದವಳೆಂದರೆ ಹೇಮಾ ಮಾತ್ರ. ತನ್ನ ಅಗಲವಾದ ಕಣ್ಣುಗಳನ್ನು ಇನ್ನೂ ಅಗಲಿಸಿ ನನ್ನನ್ನು ನೋಡಿದ್ದಳು; ಬಹಳ ಹೊತ್ತು ನೋಡುತ್ತಲೇ ಇದ್ದಳು. ನನ್ನ ಬಗ್ಗೆ ವಿಚಾರಿಸಿಕೊಂಡಿದ್ದರು ಆಂಜನೇಯಪ್ಪ ಮೇಷ್ಟ್ರು. ನಾನು ಹೇಳಿದ್ದೆ: 'ಎಂ.ಎ. ಮುಗಿಸಿದ್ದೇನೆ ಸರ್. ಆದರೆ ನೌಕರಿ ಪೌಕರಿ ಸೇರುವ ಇಚ್ಛೆ ಇಲ್ಲ. ಮನೆಯಲ್ಲಿ ಅಪ್ಪ ಒಬ್ಬನೇ. ಸಾಕಷ್ಟು ಅಡಿಕೆ ತೋಟ ಉಂಟು. ಅದರ ಉಸ್ತುವಾರಿ ನೋಡಿಕೊಳ್ಳಲು ಅಪ್ಪನೊಬ್ಬನಿಂದಲೇ ಸಾಧ್ಯವಿಲ್ಲ. ಹಾಗಾಗಿಯೇ ಊರಿನಲ್ಲಿಯೇ ಉಳಿದು ತೋಟ ಗದ್ದೆಗಳ ವಾಗಾಯ್ತಿ ನೋಡಿಕೊಳ್ಳೋಣಾಂತಿದ್ದೇನೆ. ಎಂ.ಎ. ಸರ್ಟಿಫಿಕೇಟ್ ತರೋಣಾಂತ ಮೈಸೂರಿಗೆ ಹೋಗಿದ್ದೆ. ನಿನ್ನೆ ಕಾನ್ವೊಕೇಶನ್ ಇತ್ತು. ಅದನ್ನು ಮುಗಿಸಿಕೊಂಡು ಡಿಗ್ರಿ ಸರ್ಟಿಫಿಕೇಟ್ ತೆಗೆದುಕೊಂಡು ಊರಿಗೆ ಹೊರಟಿದ್ದೇನೆ' ಎಂದಿದ್ದೆ.

ಹೇಗೂ ಬಂದಾಗಿದೆ. ಬಸ್ ಇಲ್ಲಿ ಕೆಟ್ಟು ನಿಂತಿದೆ. ತ್ಯಾಮಗೊಂಡ್ಲುವಿಗೆ ಹೋಗಿ ಆಂಜನೇಯಪ್ಪ ಮೇಷ್ಟ್ರನ್ನು ಯಾಕೆ ಕಂಡು ಬರಬಾರದು? ಬಹುಶಃ ಹೇಮಾ ಇರಲಿಕ್ಕಿಲ್ಲ, ಮದುವೆಯಾಗಿ ಗಂಡನ ಮನೆ ಸೇರಿರಬಹುದು, ಮಕ್ಕಳು ಮರೀನೂ ಆಗಿರಬಹುದು ಆಕೆಗೆ. ಆಂಜನೇಯಪ್ಪ ಮೇಷ್ಟ್ರ ಹಿರಿಯ ಮಗ ಈಗ ಓದು ಮುಗಿಸಿ ನೌಕರಿ ಪೌಕರಿ ಸೇರಿದ್ದಾನೇನೋ? ಕಿರಿಯ ಮಗ ಶಿವೂ ಏನು ಮಾಡುತ್ತಿದ್ದಾನೋ?

'ಇಂಥಾ ಬಸ್‌ಗೆ ಬರುತ್ತೇನೆ. ಆರೂವರೆ ಏಳಕ್ಕೆಲ್ಲಾ ಅದು ಬೆಂಗಳೂರಿಗೆ ಬರುತ್ತೆ. ಎಂಟನೇ ಮೈಲಿಕಲ್ ಬಳಿ ಇಳಿದು ಆಟೊ ಹಿಡಿದು ಬರುತ್ತೇನೆ' ಮನೆಯಿಂದ ಹೊರಡುವಾಗ ಮಗಳಿಗೆ ಫೋನ್ ಮಾಡಿ ಹೇಳಿದ್ದೆ. ಈಗ ಐದೂ ಮುಕ್ಕಾಲು. ಇನ್ನೂ ಮಗಳು ಅಳಿಯ ಎದ್ದಿರುವುದಿಲ್ಲ. ತ್ಯಾಮಗೊಂಡ್ಲುವಿಗೆ ಹೋದ ಮೇಲೆ, 'ನನ್ನ ಪ್ರಯಾಣ ಹೀಗೆ ತುಸು ಬದಲಾಗಿದೆ. ಸಂಜೆ ಬರುತ್ತೇನೆ' ಅಂತ ತಿಳಿಸಿದರಾಯಿತು ಎಂದುಕೊಂಡೆ.

ಬಸ್ ಬಳಿ ಹೋದೆ. ಬಸ್ ಹತ್ತಿದೆ. ನನ್ನ ಸೀಟ್‌ನ ಮೇಲ್ಗಡೆ ಟಾಪ್‌ನಲ್ಲಿ ಇಟ್ಟಿದ್ದ ನನ್ನ ಬ್ಯಾಗ್ ತೆಗೆದುಕೊಂಡೆ. ಬಸ್‌ನಿಂದ ಕೆಳಗಿಳಿದು ಬಂದೆ. ಬಸ್‌ನ ಹಿಂಬದಿಯ ಟೈರ್ ಒಂದು ಪಂಕ್ಚರ್ ಆಗಿತ್ತು. ಜಾಕ್ ಕೊಟ್ಟು ಪಂಕ್ಚರ್ ಆದ ಆ ಟೈರ್ ತೆಗೆಯುತ್ತಿದ್ದ ಡ್ರೈವರ್. ಸುತ್ತಲೂ ಕೆಲವು ಪ್ರಯಾಣಿಕರು ನಿಂತು ಅವನ ಕೆಲಸ ನೋಡುತ್ತಿದ್ದರು. ಕಂಡಕ್ಟರ್ ಕೂಡ ಅಲ್ಲಿಯೇ ನಿಂತಿದ್ದ. ಆತನ ಭುಜದ ಮೇಲೆ ಕೈಯಿಟ್ಟ ನಾನು ಮೆಲ್ಲನೆ ಅಂದೆ: 'ನಾನು ಬೆಂಗಳೂರಿಗೆ ಬರೋದಿಲ್ಲ. ಇಲ್ಲೇ ತ್ಯಾಮಗೊಂಡ್ಲುವಿಗೆ ಹೋಗಿ ಬರುತ್ತೇನೆ.'

'ತ್ಯಾಮಗೊಂಡ್ಲುವಿಗಾ?' ಆತ ನನ್ನತ್ತ ತಿರುಗಿ ಕೇಳಿದ.

'ಹೌದು' ಎನ್ನುವಂತೆ ತಲೆ ಆಡಿಸಿದೆ.

'ಇನ್ನೇನು... ಪಂಕ್ಚರ್ ಆದ ಟೈರ್ ತೆಗೆದಾಯಿತಲ್ಲ. ಬೇರೆ ಸ್ಟೆಪ್ನಿ ಕೂರಿಸಿದರಾಯಿತು. ಇನ್ನೇನು ಐದೇ ಐದು ನಿಮಿಷ' ಎಂದ ಆತ.

'ಇಲ್ಲಾ... ನಾನು ಬರೋದಿಲ್ಲ. ತ್ಯಾಮಗೊಂಡ್ಲುವಿನಲ್ಲಿ...' ಎಂದು ನಾನು ಹೇಳುತ್ತಿದ್ದಂತೆಯೇ ಆತ ಬೇರೆಯದೇ ಲೆಕ್ಕಾಚಾರ ಹಾಕಿದ: 'ಇಲ್ಲಿ ಟಿಕೆಟ್ ಬದಲಾಯಿಸೋದಕ್ಕೆ ಆಗೋಲ್ಲ ಇವರೇ. ಹೇಗೂ ಬಸ್‌ಸ್ಟ್ಯಾಂಡ್‌ಗೆ ಹೋಗುತ್ತದೆ ಬಸ್. ಅಲ್ಲಿ ಯಾರಾದರೂ ಬೆಂಗಳೂರಿಗೆ ಹೋಗೋ ಪ್ಯಾಸೆಂಜರ್ ಸಿಕ್ಕಿದರೆ ನಿಮ್ಮ ಟಿಕೆಟ್ ಬದಲಾಯಿಸಬಹುದು' ಎಂದ.

'ಪರವಾಗಿಲ್ಲ... ಬಿಡಿ' ಎಂದವನೇ ನನ್ನ ಜೇಬಿನಲ್ಲಿದ್ದ ಟಿಕೆಟ್ ತೆಗೆದು ಅವನಿಗೆ ಕೊಟ್ಟು, 'ಸಿಕ್ಕಿದರೆ ಬದಲಾಯಿಸಿಕೊಳ್ಳಿ. ಇಲ್ಲಾಂದರೆ ನಡೆಯುತ್ತೆ. ನನಗೇನೂ ಅದರ ರೊಕ್ಕ ಬೇಡ' ಎಂದೆ.